# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
## ಅಫಜಲಪೂರ

ಸಿಸಿ ನಂ.398/2018

ಚಾಸಾ-1 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕ: 19.11.2019

| | | |
|---|---|---|
| ಹೆಸರು | ಃ | ಭೀಮರಾಯ ಪೂಜಾರಿ |
| ತಂದೆ ಹೆಸರು | ಃ | ಭಗವಂತರಾಯ |
| ವಯಸ್ಸು | ಃ | 60-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ದೇವಲಗಾಣಗಾಪೂರ, ತಾ. ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಆರೋಪಿತನ ಪರಿಚಯವಿಲ್ಲ. ಅಂದಾಜು 10-ವರ್ಷಗಳ ಹಿಂದೆ ದೇವಲಗಾಣಗಾಪೂರದ ನದಿ ದಂಡೆಯಲ್ಲಿ ಮೋಟರಗೆ ಅಳವಡಿಸಿದ ತಾಮ್ರದ ವೈಯರಗಳನ್ನು ಕಳ್ಳತನವಾಗಿತ್ತು, ಸದರಿ ವೈಯರ್ ಅಂದಾಜು 25 ಸಾವಿರ ಮೌಲ್ಯದ್ದಿತ್ತು. ಈ ವಿಷಯವಾಗಿ ಪೋಲಿಸ ಠಾಣೆಗೆ ದೂರು ನೀಡಿರುತ್ತೇನೆ. ನಂತರ ಸದರಿ ವೈಯರಗಳನ್ನು ಕಳ್ಳತನ ಮಾಡಿದ ಆರೋಪಿ ಸಿಕ್ಕಿದ್ದು ಠಾಣೆಯಲ್ಲಿ ತೋರಿಸಿರುತ್ತಾರೆ. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಿರ್ಯಾದಿಯ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮಾನ್ನ ಎಪಿಪಿ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ